**ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,**
**ಅಂಕೋಲಾ.**

ಸಿಸಿ ನಂಬರ 405/2024

ಫಿರ್ಯಾದಿ - ವಿರುದ್ಧ - ಆರೋಪಿ

| | |
|---|---|
| ಅಂಕೋಲಾ ಪೊಲೀಸ ಠಾಣೆ | 1) ಮಹಮ್ಮದ ಸಾದಿಕ್ ತಂ. ಬಾಬಾಜಾನ್ ಲೋಹಾರ್,<br>ಪ್ರಾಯಃ 30 ವರ್ಷ, ಉಃ ಚಾಲಕ,<br>ಸಾಃ ಕೋಟಿಗೇರಿ ಓಣಿ, ಹಾನಗಲ್,<br>ಜಿಃ ಹಾವೇರಿ |

**ಆಪಾದನೆ**

ದಿನಾಂಕಃ 24-04-2024 ರಂದು ಬೆಳಿಗ್ಗೆ 4-00 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಹಟ್ಟಿಕೇರಿಯಲ್ಲಿ ಹಾಯ್ದಿರುವ ಎನ್ ಎಚ್ 66 ರಸ್ತೆಯಲ್ಲಿ ಆರೋಪಿಯಾದ ನೀವು ಪೋರ್ಸ ತೂಫಾನ್ ವಾಹನ ನಂ. ಕೆಎ-47/ಎಮ್-4781 ನೇದನ್ನು ಕಾರವಾರ ಕಡೆಯಿಂದ ಅಂಕೋಲಾ ಕಡೆಗೆ ಅತಿವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋದವನು ಹಟ್ಟಿಕೇರಿ ಬ್ರೀಡ್ಜ ದಾಟಿದ ನಂತರ ನಿಮ್ಮ ವಾಹನವನ್ನು ನಿಯಂತ್ರಿಸಲಾಗದೆ ಏಕಾಏಕಿ ರಸ್ತೆಯ ಬಲಕ್ಕೆ ವಾಹನವನ್ನು ಚಲಾಯಿಸಿ, ಅಂಕೋಲಾ ಕಡೆಯಿಂದ ಕಾರವಾರ ಕಡೆಗೆ ಫಿರ್ಯಾದಿ - ಯಾದೋಬಾ ಲಿಂಗಪ್ಪ ಹರಿಕಂತ್ರ ಇವರ ಮಗ ಸುಮಂತ ಇವರು ದ್ವಿಚಕ್ರ ವಾಹನ ಚಾಲನಾ ಪತ್ರ ಹೊಂದಿರದೆ, ವಿಮೆ ಇಲ್ಲದ ಮೋಟಾರ ಸೈಕಲ್ ನಂ. ಕೆಎ-19/ಇಇ-9006 ನೇದರ ಹಿಂಬದಿ ಸೀಟಿನಲ್ಲಿ ಚಾಸಾ -9 ಸುಮೀತ ರಾಮ ಹರಿಕಂತ್ರ ಮತ್ತು ಚಾಸಾ -10 ಚಾಣಕ್ಯ ರಾಮಚಂದ್ರ ಹರಿಕಂತ್ರ ಇವರಿಗೆ ಕೂರಿಸಿಕೊಂಡು ರಸ್ತೆಯ ತಮ್ಮ ಬದಿಯಿಂದ ತ್ರಿಬಲ್ ರೈಡಿಂಗ್ ಮಾಡಿಕೊಂಡು ಹೋಗುತ್ತಿದ್ದ ಮೋಟಾರ ಸೈಕಲ್ಲಿಗೆ

ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ. 279 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿ ಮೋಟಾರ್ ಸೈಕಲ್ ಹಿಂಬದಿ ಸವಾರರಿಗೆ ರಸ್ತೆ ಮಧ್ಯದ ಡಿವೈಡರ್ ಮೇಲೆ ಬೀಳಿಸಿ, ಹಿಂಬದಿ ಸವಾರರಾದ ಸುಮೀತ ರಾಮಚಂದ್ರ ಹರಿಕಂತ್ರ ಇವರಿಗೆ ತಲೆಗೆ , ಬಲಕಾಲಿಗೆ ಸಾದಾ ಸ್ವರೂಪದ ಗಾಯನೋವುಪಡಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 337 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿ ಹಿಂಬದಿ ಸವಾರರಾದ ಚಾಣಕ್ಯ ರಾಮಚಂದ್ರ ಹರಿಕಂತ್ರ ಇವರಿಗೆ ಬಲಕಾಲು, ಬಲಕೈಗೆ ಗಂಭೀರ ಸ್ವರೂಪದ ಗಾಯನೋವುಪಡಿಸಿ ಹಾಗೂ ಮೋಟಾರ್ ಸೈಕಲ್ ಸವಾರ ಸುಮಂತ ಇವರಿಗೆ ಮೋಟಾರ್ ಸೈಕಲ್ ಸಮೇತ ಡಿವೈಡರ್ ಮೇಲೆ ಬೀಳಿಸಿ ಅವರ ಹಣೆ, ಎದೆ ಹಾಗೂ ಬಲಕೈ ಮೊಣಗಂಟಿನ ಕೆಳಗೆ ಗಂಭೀರ ಸ್ವರೂಪದ ಗಾಯನೋವುಪಡಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 338 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಂದು ಆರೋಪಿಯಾದ ನೀವು ಅಪಘಾತಪಡಿಸಿದ್ದರಿಂದ ಮೋಟಾರ ಸೈಕಲ್ಲಿನ ಪೆಟ್ರೋಲ್ ಟ್ಯಾಂಕಗೆ ಬೆಂಕಿ ಹತ್ತಿ ಮೋಟಾರ ಸೈಕಲ್ ಸವಾರ ಸುಮಂತ ಯಾದೋಬಾ ಹರಿಕಂತ್ರ ಮತ್ತು ಮೋಟಾರ ಸೈಕಲ್ ಬೆಂಕಿಯಲ್ಲಿ ಸುಟ್ಟು ಹೋಗಿ ಸುಮಂತ ಅವರು ಸ್ಥಳದಲ್ಲಿಯೇ ಮರಣವನ್ನುಂಟಾಗುವಂತೆ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ..

ಐದನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ಸಮಯದಲ್ಲಿ ಆರೋಪಿಯಾದ ನೀವು ಚಾಲಕ ಕರ್ತವ್ಯ ಪಾಲಿಸದೇ ಅಪಘಾತಪಡಿಸಿದ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿ ಆ ಮೂಲಕ ಮೋಟಾರ ವಾಹನ ಕಾಯ್ದೆ ಕಲಂ. 187 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ಆಪಾದನೆ ಬಗ್ಗೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ 2 ಮೇಲ್ಕಂಡ ಅಪರಾಧಗಳಿಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀರಿ ಅಥವಾ ವಿಚಾರಣೆ ಆಗಬೇಕು ಅಂತಾ ಬಯಸುತ್ತೀರಿ?

ಉತ್ತರಃ

( ಮೇಲಿನ ಆಪಾದನೆಯನ್ನು ಆರೋಪಿಗೆ ಬಹಿರಂಗ ನ್ಯಾಯಾಲಯದಲ್ಲಿ ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

Sd/-

ದಿನಾಂಕಃ 23-01-2025. ( ಅರ್ಪಿತಾ ಬಿ. ಬೆಲ್ಲದ)

ಅಂಕೋಲಾ ಹೆ. ಪ್ರ ದ ನ್ಯಾದಂ, ಅಂಕೋಲಾ.